ಮುಖದ ಜಾಗ ಮೀರಿದ ನಗುವನ್ನು ಚೆಲ್ಲುತ್ತ ಎರಡು ಹೆಜ್ಜೆ ಮುಂದೆ ಬಂದು ಸ್ವಾಗತಿಸಿದ. ಬೆರಗಿನಲ್ಲಿ ತೆರೆದ ಬೊಚ್ಚು ಬಾಯಿ ಮುಚ್ಚಲು ಅವನು ಮರೆತಿದ್ದ. ದೇವರ ಗಾಜಿನ ಫೋಟೊಗಳಿಂದ ತುಂಬಿದ ಜಗಲಿಗೆ ಕರೆದು ಉಪಚರಿಸಿದ. ನಂದಾಚಾರಿಯ ಸಪೂರ ಹೆಂಡತಿ, ನೈಟಿ ತೊಟ್ಟ ಸೊಸೆ ಮತ್ತು ನಡಗುವ ತಾಯಿ ಬಾಗಿಲಿಗೆ ಬಂದು ನಿಂತರು. "ಗುರುತು ಸಿಕ್ಕೊ ನನಗೆ ತಟಗಾರಾಯ್ತು" ಎಂದೆ. "ನಿಮ್ಮನೆ ಅನ್ನ ಉಂಡವರು ನಾವು. ಹಾಂಗೆ ಬೆಗ್ಗನೆ ಮರಿತೀದಾ" ಆಚಾರಿಯ ಹೆಂಡತಿ ಉಕ್ಕಿದಳು. ಮರುಕ್ಷಣ ಮನೆಯವರ ಹೆಸರನ್ನು ನೆನಪಿಸುತ್ತ ವಿಚಾರಿಸಿದಳು. "ಚಾ ಮಾಡು" ಆಚಾರಿ ಒರಾತ ಮಾಡಿದ. ಮುದಿ ತಾಯಿ ಯಾಂತ್ರಿಕವಾಗಿ ಕೈ ಮುಗಿದು ತನ್ನ ಕೆಲಸ ಮುಗಿಯಿತೆಂದು ಹಿಂದುರುಗಿ ಹೋದಳು. ಸೊಸೆ ಕಾಲ್ಗೆಜ್ಜೆ ಸದ್ದು ಮಾಡುತ್ತ ಒಯ್ಯಾರದಲ್ಲಿ ನಡೆದಳು. ಮಾತಿಗೆ ವಿಸ್ತಾರ ಪೀಠಿಕೆ ಹಾಕುವ ಧರ್ತಿಯಲ್ಲಿ ನೆಲದ ಮೇಲೆ ಕುಳಿತ ಆಚಾರಿಗೆ, "ಬೀಗದ ಕತೆ ಏನಾಯ್ತು?" ಎಂದೆ. ಈ ಪ್ರಶ್ನೆಗಾಗಿಯೇ ಕಾದವನಂತೆ ಅವನು ಚುರುಕಾದ.

"ಬೀಗ ಮಾಡೋದು ನಿಲ್ಸಿ ಹದಿನೈದು ವರ್ಷ ಆತೇನೊ. ಪುರೋಟಿ ಬೀಳೋದಿಲ್ಲ; ಮಜೂರಿ ಹುಟ್ಟೋದಿಲ್ಲ; ಅಪ್ಪಯ್ಯ ಬದುಕಿದ್ದಷ್ಟು ಕಾಲ ಹೇಗೊ ನಡೀತು. ನಾವಿಬ್ರೂ ಸೇರಿ ದಿನಕ್ಕೆ ನಾಲ್ಕು ಬೀಗ ಟಂಕಿಸಿದ್ರೆ ಅದೇ ದೊಡ್ಡದು. ಹೊನ್ನಾವರದ ಬಂದರು ಪೇಟೇಲಿ ಮಾರಾಟ ಆದ್ರೆ ನಸೀಬ. ಇಲ್ಲಾಂದ್ರೆ ಹೆಗ್ಡೇಕರ್ ಅಂಗ್ಡೀಲಿ ಇಟ್ಟು ಬರೋದು. ಮಂದಿ ಕೈಲಿ ದುಡ್ಡು ಓಡಾಡೊ ದಿನಮಾನ ಅಲ್ಲ. ಒಂದೊಂದು ಸಲ ನಿಮ್ಮ ಕಡೆ ನಾ ಬರ್ತಿದ್ದದ್ದು ನೆನಪು ಮಾಡ್ಕಳಿ. ಬೀಗಕ್ಕೆ ಬೇಡಿಕೆ ಇತ್ತು ಬಿಡಿ. ಬೆಲೆ ಕಮ್ಮಿ ಇದ್ರೂ ಸಮಾಧಾನ ಇತ್ತು. ಇಡೀ ಜಿಲ್ಲೇಲಿ ಅಪ್ಪಯ್ಯನಿಗೆ ಮಾತ್ರ ಬ್ರಿಟೀಶರು ಬಂದೂಕು ಮಾಡುವ ಲೈಸನ್ಸ್ ಕೊಟ್ಟಿದ್ರು. ಗರ್ದಿ ಗೌರವದ ಕಾಲ ಅದು. ಅಪ್ಪಯ್ಯನ ಹಾಂಗೆ ನಮಗ್ಯಾರಿಗೂ ಕಸಬಿನ ಮ್ಯಾಲೆ ಕೈ ಕೋರಲೇ ಇಲ್ಲ. ಬೀಗ, ಬಂದೂಕು ತಯಾರಿಸೋದಷ್ಟೇ ಅಲ್ಲ ಅದಕ್ಕೆ ಬೇಕಾದ ಹತ್ಯಾರಾನೂ ಅವನೇ ಮಾಡ್ಕಳ್ತಿದ್ದ. ಈಗ ನಮ್ಮ ಮನೆತನದ ಮರ್ಯಾದೆ ಸ್ವಲ್ಪ ಇಟ್ಟಂವ ಮಂಜಪ್ಪನೇ" ಎಂದವನು ಒಳಗೆ ಹೋಗಿ ಕಬ್ಬಿಣದ ಪೆಟ್ಟಿಗೆಯೊಂದನ್ನು ತಂದು ನನ್ನೆದುರು ಮುಚ್ಚಳ ತೆರೆದ. ಅದರಲ್ಲಿ ನಂದಾಚಾರಿಯ ತಂದೆಯ ಕಾಲದ ಮೂರು ನಮೂನೆಯ ಬೀಗಗಳು, ಅದರ ಬಿಡಿ ಭಾಗಗಳು, ಉಳಿ, ಸುತ್ತಿಗೆ, ಚಿಮಟಿಗೆ, ಅರ ತಿಕ್ಕುವ ಕಡ್ಡಿ, ಪಾನರ್, ಪಕ್ಕಡ್ ಇನ್ನೂ ವಿವಿಧ ರೀತಿಯ ಪಕ್ಷಿಗಳ ಚುಂಚುಪಂಜಿನಂಥ ವಿಚಿತ್ರ ಸಲಕರಣೆಗಳು ಚಿರ ನಿದ್ರಾವಸ್ಥೆಯಲ್ಲಿದ್ದವು. ಕುರ್ವೆಗೆ ಬರುವ ಪ್ರವಾಸಿಗರು ಒಂದು ಯುಗದಲ್ಲಿ ಲೋಕ ಪ್ರಖ್ಯಾತವಾಗಿದ್ದ ಬೀಗ ನೋಡಲು ಪ್ರಾಚೀನ ಸ್ಮಾರಕ ಪ್ರೀತಿಯಿಂದ ಆಚಾರಿಯ ಮನೆಗೆ ಭೇಟಿ ನೀಡಿ ಹೋಗುತ್ತಾರೆ. ಕಬ್ಬಿಣಉಕ್ಕು ಕಾರ್ಖಾನೆಗಳ ಬೀಗದ ಉತ್ಪಾದನೆಗಳು ಮಾರುಕಟ್ಟೆಗೆ ಬರಲಾರಂಭಿಸಿದ ನಂತರ ನಂದಾಚಾರಿಯ ಬೀಗ ಸೋತು ಹೋದ ಬಗ್ಗೆ ಕೇಳಿದೆ. ಅನ್ನ ಕಸಿದ ಕಾರ್ಖಾನೆಗಳನ್ನು ಅವನು ಶಪಿಸುತ್ತ ಕೂರಲಿಲ್ಲ. ತಲೆತಲಾಂತರದಿಂದ ಕಲಿತ ಮರಗೆಲಸಕ್ಕೆ ಅವನು ಮರಳಿದನಂತೆ. ಈ ನಡುವೆ ಶಿಲುಬೆ ಕ್ರೈಸ್ತನ, ಕಮಲ ಮೇಲೆ ಆಸೀನಳಾದ ಲಕ್ಷ್ಮಿಯ ಚಿತ್ರ ಕೆತ್ತಿದ ಹೊಸ್ತಿಲ ಬಾಗಿಲುಗಳತ್ತ ನನ್ನ ಗಮನ ಹೋಯಿತು. ಅವನ ಬಾಯಿಂದ ಕುಶಲ ಕಲೆಗಳ ಅವನತಿಯ ವಿಷಾದಗಾಥೆಯನ್ನು ಕೇಳಿಸಿಕೊಳ್ಳುತ್ತಲಿದ್ದ ನನಗೆ ಕುರ್ವೆಗೆ ಬರುವಾಗ ಕಂಡ ಹೊಗೆ ಉಗುಳುವುದನ್ನು ಶಾಶ್ವತ ನಿಲ್ಲಿಸಿದ ಸ್ತಬ್ಧ ಹಂಚಿನ ಕಾರ್ಖಾನೆಗಳು ನೆನಪಾದವು. ಅವನ ಮಿತಿಯಲ್ಲಿ ಬಾಗಿಲ ಚೌಕಟ್ಟು, ಕಿಟಕಿಗಳನ್ನು ಮಾಡಲು ತೊಡಗಿದನಂತೆ. ಇದರಿಂದ ದಿನದ ಕೂಳಿಗೆ ಕೊರತೆ ಅನಿಸಲಿಲ್ಲ. ಬೀಗ ತಯಾರಿಕೆ ತಂದು ಕೊಟ್ಟ ಲೋಕ ಮಾನ್ಯತೆಯನ್ನು ಅಷ್ಟು